INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -4, July-August, 2025
PageNo,-46-52
Peer -Reviewed, Refereed Journal

# ಮೈಸೂರು ಸಂಸ್ಥಾನದಲ್ಲಿ ಪ್ರಾಣಿಹಿಂಸೆ ನಿಷೇಧ ಕಾಯ್ದೆ –ಒಂದು ಅವಲೋಕನ

ಮಹೇಶ.ಎಂ. [1]

ಮೈಸೂರು ಸಂಸ್ಥಾನವು ಬ್ರಿಟಿಷರಿಂದ ಮರಳಿ ಅಧಿಕಾರ ಪಡೆದು ಪ್ರಜಾಪ್ರತಿನಿಧಿಸಭೆ ರಚಿಸಿ, ಸಂಸ್ಥಾನದ ಅಭ್ಯುದಯಕ್ಕೆ ಅಡಿಪಾಯವಾಗಿ ವಿಚಾರವಂತರನ್ನು ಮತ್ತು ವಿದ್ಯಾವಂತರನ್ನು ಸದ್ಬಳಕೆ ಮಾಡಿಕೊಂಡು, ಸಂಸ್ಥಾನದ ಎಲ್ಲಾ ಕ್ಷೇತ್ರಗಳ ಸಮಸ್ಯೆಗಳನ್ನು ಸಭೆಯಲ್ಲಿ ಚರ್ಚಿಸಿ ಪರಿಹಾರ ಮಾರ್ಗಗಳನ್ನು ಕಂಡುಕೊಂಡು ಅಭಿವೃದ್ಧಿಸಾಧಿಸಿ ಮನ್ನಣೆಗಳಿಸಿರುವುದು ತಿಳಿದಿರುವ ವಿಚಾರ, ಸಂಸ್ಥಾನದಲ್ಲಿ ಸುಭದ್ರ ಆಡಳಿತ ಸ್ಥಾಪನೆಗಾಗಿ ಮತ್ತು ತನ್ನ ಪ್ರಜೆಗಳ ಅಭ್ಯುದಯಕ್ಕಾಗಿ ಅನೇಕ ಕಲ್ಯಾಣ ಕಾರ್ಯಕ್ರಮ ಯೋಜನೆಗಳನ್ನು ರೂಪಿಸಲು ಮೈಸೂರು ಸಂಸ್ಥಾನವು ಅನೇಕ ಹೊಸ ಹೆಜ್ಜೆಗಳನ್ನಿಟ್ಟಿತು, ಇಂತಹ ಹೊಸ ಆರಂಭದ ಅಡಿಪಾಯಗಳಲ್ಲಿ ತನ್ನ ಸಂಸ್ಥಾನದಲ್ಲಿ ವಾಸಿಸುತ್ತಿರುವ ಪ್ರಜೆಗಳ ಹೊರತಾಗಿ ಪ್ರಜೆಗಳ ಜೊತೆ ಒಡನಾಟವಿರುವ ಜಾನುವಾರುಗಳ ಮೇಲು ಗಮನಹರಿಸಿ ಈ ಜೀವಿಗಳ ಮೇಲೆ ಅಡೆತಡೆ ಇಲ್ಲದೆ ನಡೆಸುತ್ತಿದ್ದ ಕ್ರೌರ್ಯವನ್ನು ತಡೆಯಲು ಮತ್ತು ಅವುಗಳ ರಕ್ಷಣೆಗಾಗಿ ಕ್ರಮ ಕೈಗೊಳ್ಳಲು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆಸಿ ಕಾಯ್ದೆಯನ್ನು ಸಿದ್ದಪಡಿಸಿ ಹಿಂಸೆಯನ್ನು ತಡೆಗಟ್ಟಲು ಕಾನೂನು ಜಾರಿ[1]ಗೊಳಿಸಲು ಇಟ್ಟ ಹೆಜ್ಜೆ ವಿಶೇಷತೆಯೇ ಸರಿ.

ಅನಾದಿಕಾಲದಿಂದಲೂ ಮಾನವ ಮತ್ತು ಪ್ರಾಣಿ ಪಕ್ಷಿಗಳ ನಡುವಿನ ಒಡನಾಟವು ಇಂದಿಗೂ ಒಂದಿಲ್ಲೊಂದು ರೀತಿಯಲ್ಲಿ ಬೆಸೆದಿದೆ, ಪ್ರಾಣಿ ಸಂಕುಲವಿಲ್ಲದ ಮಾನವನ ಜೀವನ ಕಷ್ಟಕರ ಹಾಗೂ ಮಾನವನ ಅಭಿವೃದ್ಧಿ ಪ್ರಾಣಿಜನ್ಯದಿಂದಲೇ ಆರಂಭವಾಗಿದೆ, ಪ್ರಾಣಿಗಳಿಲ್ಲದೆ ಮಾನವನ ಜೀವನ ಊಹಿಸಲು ಅಸಾಧ್ಯ, ತನ್ನ ವಿರುದ್ಧ ತಿರುಗಿ ಬೀಳದ ಪ್ರಾಣಿ ಸ್ಥಿತಿಯರಿತ ಮಾನವ, ಪ್ರಾಣಿ ಸಂಕುಲವನ್ನು ತನಗೆ ಬೇಕಾದಂತೆ ಬೇಕಾದಾಗಲೆಲ್ಲ ಬಳಸಿಕೊಂಡು ಅವುಗಳ ಮೇಲೆ ಹವ್ಯಾಹತವಾಗಿ ಹಿಂಸೆಯ ಪಾರಮ್ಯ ಮೆರೆದಿದ್ದಾನೆ, ಇಂತಹ ಹಿಂಸಾ ಕೃತ್ಯಗಳನ್ನು ಮೈಸೂರು ಸಂಸ್ಥಾನದಲ್ಲೂ ಕಾಣಬಹುದು ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಜಾನುವಾರುಗಳ ಮೇಲೆ ತನ್ನ ಕ್ರೂರ ಛಾಯೆ ಮೂಡಿಸಿದ್ದಾನೆ, ಜಾನುವಾರುಗಳನ್ನು ಚರ್ಮಕ್ಕಾಗಿ, ಭಕ್ಷಣೆಗಾಗಿ, ಪ್ರಾಣಿಜನ್ಯ ವಸ್ತುಗಳಿಗಾಗಿ, ಜಾನುವಾರುಗಳನ್ನು ಕದಿಯುವಂತಹ ಪ್ರಕರಣಗಳು[2] ಮೈಸೂರು ಸಂಸ್ಥಾನದ ಪೊಲೀಸ್ ವರದಿಗಳಲ್ಲಿ ಕಂಡುಬಂದಿದೆ.

1. ಸಂಶೋಧನಾ ವಿದ್ಯಾರ್ಥಿ,ಇತಿಹಾಸ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಜಾನುವಾರುಗಳನ್ನು ತನ್ನ ಅಗತ್ಯತೆಗೆ ಬಳಸಿಕೊಳ್ಳಲು ವಿಷ ಉಣಿಸುವುದು, ಕ್ರೌರ್ಯ ಎಸಗುವುದು, ಕ್ರೂರವಾಗಿ ನಡೆಸಿಕೊಳ್ಳುವುದು, ಕೊಲ್ಲುವುದು, ಹಿಂಸೆ ಮಾಡಿರುವುದು ಮೈಸೂರು ಸಂಸ್ಥಾನದ ಆಡಳಿತ ವರದಿ[3]ಗಳಲ್ಲಿ ದಾಖಲಾಗಿದೆ, ಇವುಗಳನ್ನು ಅಂಕಿ ಅಂಶಗಳ ಮೂಲಕ ಈ ಕೆಳಕಂಡಂತೆ ಕಾಣಬಹುದಾಗಿದೆ.

**ಮೈಸೂರು ಸಂಸ್ಥಾನದ ಆಡಳಿತ ವರದಿ ಅಂಕಿ ಅಂಶಗಳು**[4]

| **ವರ್ಷಗಳು** | **1874** | **75/76** | **1877** | **1878** | **1881** | **1882** | **1883** | **1884** | **1885** |
|---|---|---|---|---|---|---|---|---|---|
| **ದನ ಕಳ್ಳತನ** | 172 | 100 | 129 | 526 | 144 | 156 | 136 | 146 | 203 |
| **ಹಿಂಸಾಕೃತ್ಯಗಳು** | – | – | – | – | 16 | – | 30 | 55 | 73 |
| **ವರ್ಷಗಳು** | **1886** | **1887** | **1888** | **1889** | **1890** | **1891** | **1892** | **1893** | **1894** |
| **ದನ ಕಳ್ಳತನ** | 165 | 111 | 123 | 118 | 112 | 71 | 34 | 105 | 97 |
| **ಹಿಂಸಾಕೃತ್ಯಗಳು** | 39 | 111 | 105 | 106 | 89 | – | 82 | 58 | 63 |

ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಸದಸ್ಯರುಗಳು ಪ್ರಾಣಿಗಳ ಮೇಲಿನ ಹಿಂಸೆ ವಿರುದ್ಧ ಕಾನೂನು ಸಿದ್ಧಪಡಿಸಿ ಜಾರಿಯಾಗಲು ಸಭೆಯಲ್ಲಿ ಅನೇಕ ಚರ್ಚೆಗಳನ್ನು ನಡೆಸಿ ಸಭೆಯ ಗಮನ ಸೆಳೆದು ತಾವು ಪ್ರತಿನಿಧಿಸುತ್ತಿದ್ದ ಪ್ರದೇಶಗಳಲ್ಲಿ ನಡೆಯುತ್ತಿದ್ದ ಪ್ರಾಣಿಗಳ ಮೇಲಿನ ಹಿಂಸೆಗಳನ್ನು ಸಭೆಗೆ ಮನದಟ್ಟು ಮಾಡಿ ಪ್ರಾಣಿಗಳ ಮೇಲಿನ ಕ್ರೌರ್ಯದ ವಿರುದ್ಧ ಕಾನೂನು ಜಾರಿಯ ಅವಶ್ಯಕತೆಯನ್ನು ತಿಳಿಸಿ ಮಾನವತೆ ಮೆರೆದಿದ್ದಾರೆ.

1. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ 1888ರಲ್ಲಿ ಚಾಮರಾಜನಗರ ತಾಲ್ಲೂಕು ಪ್ರಾಂತವನ್ನು ಪ್ರತಿನಿಧಿಸುತ್ತಿದ್ದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ.ಅಣ್ಣಯ್ಯ ಪಂಡಿತ್ ರವರು ಪ್ರಾಣಿಗಳ ಮೇಲಿನ ಹಿಂಸೆಯ ಬಗ್ಗೆ ಸಭೆಯಲ್ಲಿ ಪ್ರಥಮವಾಗಿ ಪ್ರಸ್ತಾಪಿಸಿದರು.[5]
2. ಬೆಂಗಳೂರು ಡಿಸ್ಟ್ರಿಕ್‌ನಿಂದ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ 1888ರ ಪ್ರತಿನಿಧಿಗಳಾದಂತಹ ದೊಡ್ಡಿ ವೆಂಕಟರಮಣಶೆಟ್ಟಿ, ವೇಲು ಮುದಲಿಯರ್, ಹುಡಿ ಹನುಮರೆಡ್ಡಿ, ಅಣ್ಣಯ್ಯಪ್ಪಶೆಟ್ಟಿ, ಕಲೋಜಿರಾವ್ ಅಣ್ಣಯ್ಯಪ್ಪ, ಅಪ್ಪಾಜಯ್ಯ, ಈ ಆರು ಪ್ರಜಾಪ್ರತಿನಿಧಿ ಸಭೆ ಸದಸ್ಯರುಗಳು ಬೆಂಗಳೂರು ಡಿಸ್ಟ್ರಿಕ್‌ನಲ್ಲಿ ಜರುಗುತ್ತಿದ್ದಂತ ಪ್ರಾಣಿಗಳ ಮೇಲಿನ ಹಿಂಸೆಗಳ ಬಗ್ಗೆ ಸಭೆಗೆ ವಿವರಿಸಿದರು[6].

3. 1891ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಭಾಗಿಯಾಗಿದ್ದ ಎಲ್ಲಾ ಸದಸ್ಯರುಗಳು ಸಂಸ್ಥಾನದಲ್ಲಿ ನಡೆಯುತ್ತಿದ್ದ ಪ್ರಾಣಿಗಳ ಮೇಲಿನ ಹಿಂಸೆಯ ವಿರುದ್ದವಾಗಿ ಕಾಯ್ದೆ ಸಿದ್ದಪಡಿಸಬೇಕೆಂದು ಸಭೆಯ ಸದಸ್ಯರೆಲ್ಲರೂ ಮನವಿ ಮಾಡಿದ್ದಾರೆ[7].
4. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ 1892 ಹಾಜರಾಗಿದ್ದ ತ್ವರಿತವಾಗಿ ಜಾನುವಾರುಗಳಿಗೆ ಎಸಗುತ್ತಿದ್ದ ಕ್ರೂರಗಳನ್ನು ನಿಯಂತ್ರಿಸಲು ಪ್ರಾಣಿ ಹಿಂಸಾ ಸುಧಾರಣೆಗಾಗಿ ಕಾಯ್ದೆ ಜಾರಿಯಾಗಬೇಕೆಂದು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ಎಲ್ಲರೂ ಒಟ್ಟಾಗಿ ಸಭೆಗೆ ಒತ್ತಾಯಿಸಿದರು[8].
5. 1892 ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಬಳ್ಳಾಪುರ ತಾಲೂಕನ್ನು ಪ್ರತಿನಿಧಿಸುತ್ತಿದ್ದಂತಹ ಶ್ರೀ.ಜವಳಿ ಸುಬ್ಬಶಾಸ್ತ್ರಿಯವರು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟಲು ಕಾಯ್ದೆಯು ಸಂಸ್ಥಾನಕ್ಕೆ ಅವಶ್ಯಕವಿದೆಯೆಂದು ಸರ್ಕಾರಕ್ಕೆ ಮನದಟ್ಟು ಮಾಡಿದರು[9].
6. 1892ರಲ್ಲಿ ಮೈಸೂರು ಪ್ರಾಂತ್ಯವನ್ನು ಪ್ರತಿನಿಧಿಸುತ್ತಿದ್ದ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದ ಓಡಿ.**HAIGH** ರವರು ವಿದೇಶಿಯರಾದರು ಸಂಸ್ಥಾನದ ಪ್ರಾಣಿಗಳ ಮೇಲಿನ ಕಾಳಜಿಯಿಂದ ಹಾಗೂ ತಮ್ಮ ಪ್ರಾಂತ್ಯದಲ್ಲಿ ಪ್ರಾಂಣಿಹಿಂಸೆಯನ್ನು ನಿಲ್ಲಿಸಲು ತುರ್ತಾಗಿ ಕಾಯ್ದೆ ಜಾರಿ ಮಾಡಿ ಪ್ರಾಣಿಗಳನ್ನು ಪ್ರಜೆಗಳಂತೆ ನೋಡಿಕೊಳ್ಳಬೇಕೆಂದು ಸಭೆಗೆ ಮನವಿ ಮಾಡಿದರು[10].
7. ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ 1894ರ ಗುಬ್ಬಿ ತಾಲೂಕಿನ ಪ್ರತಿನಿಧಿಯಾದಂತಹ ಶ್ರೀ.ರಾಮಾನುಜ ಅಯ್ಯಂಗಾರ್ ರವರು ಪ್ರಾಣಿಗಳ ಮೇಲಿನ ಹಿಂಸೆಯನ್ನು ತಪ್ಪಿಸಲು ಕಠಿಣ ಕಾಯ್ದೆಯನ್ನು ಜಾರಿಗೆ ಮಾಡುವಂತೆ ಸರ್ಕಾರವನ್ನು ಕೋರಿಕೊಂಡರು[11].
8. 1894ರಲ್ಲಿ ಚನ್ನಪಟ್ಟಣ ಮುನಿಸಿಪಾಲಿಟಿ ಪ್ರತಿನಿಧಿಯಾದ ಷೇಕ್ ಮೊಹದೆನ್ ಸಾಹಿಬ್ ರವರು ತಮ್ಮ ಪ್ರಾಂತ್ಯದಲ್ಲಿ ಗಾಡಿಗಳನ್ನು ಹೊಂದಿದ್ದವರು ಒಂಟೆತ್ತಿನ ಗಾಡಿ ಮತ್ತು ಜೋಡೆತ್ತಿನ ಗಾಡಿಗಳಲ್ಲಿ ಅತಿಯಾದ ಭಾರವನ್ನು ಎತ್ತುಗಳ ಮೂಲಕ ಎಳೆಸುತ್ತಿರುತ್ತಾರೆ, ಚನ್ನಪಟ್ಟಣ ಮುನಿಸಿಪಾಲಿಟಿಯಾದ್ಯಂತ ಪ್ರಾಣಿಗಳನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಾರೆ, ಇಂಥವರನ್ನು ಶಿಕ್ಷಿಸುವಂತ ಕಾನೂನನ್ನು ಜಾರಿ ಮಾಡುವಂತೆ ಸಭಾಧ್ಯಕ್ಷರನ್ನು ಕೇಳಿಕೊಂಡರು[12].

ಈ ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳು ಸಭೆಗೆ ತಮ್ಮ ಪ್ರಾಂತ್ಯದ ಪ್ರಾಣಿಗಳ ಮೇಲಿನ ಕ್ರೌರ್ಯಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತಿಳಿದು ಕಾಯಿದೆ ಸಿದ್ಧಪಡಿಸಿ ಜಾರಿಯಾಗಲು ಪ್ರತಿ ವರ್ಷ ಸರ್ಕಾರದ ಗಮನ ಸೆಳೆದು ಒತ್ತಾಯ ಮಾಡಿ ಪ್ರಾಣಿಗಳ ಮೇಲೆ ಎರಗುತ್ತಿದ್ದ ಹಿಂಸೆಯನ್ನು ತಡೆಗಟ್ಟಲು ಕಾನೂನನ್ನು ಸಿದ್ಧಪಡಿಸಿ ಜಾರಿಯಾಗಲು ಜಾರಿಯಾಗುವಂತೆ ಮಾಡಿದರು ಅವರಿಗೆ ಸಿಕ್ಕಸ್ಥಾನ ಮತ್ತು ಅವಕಾಶವನ್ನು ಸದುಪಯೋಗಪಡಿಸಿಕೊಂಡ ಬಗೆ ಶ್ಲಾಘನೀಯವಾಗಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ವಿವಿಧ ಪ್ರಾಂತ್ಯ ಸದಸ್ಯರುಗಳು ಚರ್ಚಿಸಿದ್ದ ಚರ್ಚೆಗಳು ಹಾಗೂ ಮೈಸೂರು ಸಂಸ್ಥಾನದ ಆಡಳಿತ ವರದಿಗಳಲ್ಲಿ ದಾಖಲಾಗಿದ್ದ ಪ್ರಾಣಿಗಳ ಮೇಲಿನ ಕ್ರೌರ್ಯಗಳ ವರದಿಯ ಅಂಕಿ ಅಂಶಗಳನ್ನು ಅರಿತ ಮೈಸೂರು ಸಂಸ್ಥಾನವು, ಬ್ರಿಟಿಷರು ಬಂಗಾಳ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಪ್ರಾಣಿಗಳ ಹಿಂಸೆಗಳನ್ನು ತಪ್ಪಿಸಲು, ಈ ಹಿಂದೆಯೇ ಬ್ರಿಟಿಷ್ ಭಾರತದಲ್ಲಿ ಪ್ರಥಮವಾಗಿ ಬಂಗಾಳ ಪ್ರಾಂತ್ಯದಲ್ಲಿ 1869ರಲ್ಲಿ ಪರಿಚಯಿಸಲಾಗಿದ್ದ, ಎ ರೆಗ್ಯುಲೇಷನ್ ಫಾರ್ ದ ಪ್ರಿವೆನ್ಷನ್ ಆಫ್ ಕ್ರುಯೆಲ್ಟಿ ಟು ಅನಿಮಲ್ಸ್ ಕಾಯ್ದೆಯನ್ನು ಜಾರಿಗೆ ತಂದಿತ್ತು, ಈ ಕಾಯ್ದೆಯ ಪ್ರಭಾವದಿಂದ ಮೈಸೂರು ಸಂಸ್ಥಾನ ಹಲವಾರು ವರ್ಷಗಳಿಂದ ಸಂಸ್ಥಾನದಲ್ಲಿ ಪ್ರಾಣಿಗಳನ್ನು ಉತ್ತಮವಾಗಿ ನೋಡಿಕೊಳ್ಳದೆ ಪ್ರಣಿಗಳ ಮೇಲೆ ಎಸಗುತ್ತಿದ್ದ ದುಷ್ಕೃತ್ಯಗಳ ಬಗ್ಗೆ ಚರ್ಚಿತವಾಗಿದ್ದ ಪ್ರಾಣಿ ಹಿಂಸೆ ವಿರುದ್ದ ಕ್ರಮಕೈಗೊಳ್ಳಲು, ಈ ಸಮಸ್ಯೆಯ ಪರಿಹಾರಕ್ಕಾಗಿ ಪ್ರಾಣಿಗಳಿಗಾಗುತ್ತಿದ್ದ ಸಂಕಷ್ಟಗಳನ್ನು ನಿವಾರಿಸಲು, ಮೈಸೂರು ಸಂಸ್ಥಾನದ ಘನವೆತ್ತ ಮಹಾರಾಣಿ ರೀಜೆಂಟ್ ವಾಣಿವಿಲಾಸರ ಅಭಿಲಾಷೆಯಂತೆ, ಪೂರ್ವಗಾಮಿ ಯೋಜನೆಯನ್ನು ಹೊಂದಿದ್ದ ಅವರ ದಿವಾನರಾದ ಶೇಷಾದ್ರಿ ಅಯ್ಯರ್ ನೇತೃತ್ವದಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಎಲ್ಲಾ ಸದಸ್ಯರ ಒಮ್ಮತದ ಅಭಿಪ್ರಾಯದಂತೆ ಮೈಸೂರು ಸಂಸ್ಥಾನವು **A REGULATION FOR THE PREVENTION OF TO ANIMALS ACT 1895**[13] ಕಾಯ್ದೆಯನ್ನು ದಿನಾಂಕ : 27.06.1895 ರಲ್ಲಿ ಜಾರಿಗೆತಂದಿತು.

**A REGULATION FOR THE PREVENTION OF TO ANIMALS ACT 1895ರ ಕಾಯ್ದೆಯ ಮುಖ್ಯಾಂಶಗಳು :–**

1. ಯಾವುದೇ ವ್ಯಕ್ತಿ ಯಾವುದೇ ಸಾರ್ವಜನಿಕ ಸ್ಥಳ ಅಥವಾ ರಸ್ತೆಗಳಲ್ಲಿ ಪ್ರಾಣಿಗಳ ಮೇಲೆ ಕ್ರೌರ್ಯ ಎಸಗಿದರೆ ಮತ್ತು ಕೊಲ್ಲಲ್ಪಟ್ಟ ಪ್ರಾಣಿಯನ್ನು ಮಾರಾಟ ಮಾಡಿದರೆ ಅಂತಹ ವ್ಯಕ್ತಿಗಳಿಗೆ ರೂ.100/– ದಂಡ ವಿಧಿಸಿತು.
2. ಪ್ರಾಣಿಗಳನ್ನು ಕ್ರೂರವಾಗಿ ಒಡೆಯುವುದು, ಓವರ್ ಡ್ರೈವ್(ಅತಿಯಾಗಿ ಓಡಿಸುವುದು ಮತ್ತು ಅತಿದೂರ ವಿಶ್ರಾಂತಿ ನೀಡದೆ ಪ್ರಯಾಣ ಮಾಡುವುದು) ಮತ್ತು ಓವರ್‌ಲೋಡ್(ಪ್ರಾಣಿಗಳಿಗೆ ಅವುಗಳ ಸಾಮರ್ಥ್ಯಕ್ಕಿಂತ ಅಧಿಕ ಭಾರ ಹೊರಿಸಿ ನಡೆಸುವುದು) ಮಾಡುವ ಮೂಲಕ ಪ್ರಾಣಿಗಳನ್ನು ಕೆಟ್ಟದಾಗಿ ನಡೆಸಿಕೊಂಡವರಿಗೆ ರೂ.100/– ದಂಡದ ಶಿಕ್ಷೆ ಪ್ರಕಟಿಸಿತು.
3. ಯಾವುದೇ ಪ್ರಾಣಿಯನ್ನು ಗೌಪ್ಯವಾಗಿ ಎಲ್ಲಿಯಾಗಲಿ ಬಂಧಿಸಿ ಪ್ರಾಣಿಯನ್ನು ಹಿಂಸಿಸಿದರೆ ಅಥವಾ ಗೌಪ್ಯವಾಗಿ ಒಯ್ಯುವುದು ಮಾಡಿ ಪ್ರಾಣಿಯ ಉಸಿರಾಟಕ್ಕೆ ತೊಂದರೆಗೆ ಒಳಪಡಿಸಿದಂತವರಿಗೆ ರೂ.100/– ದಂಡ ವಿಧಿಸಿತು.
4. ತನ್ನ ಅಗತ್ಯತೆಗಾಗಿ ಪ್ರಾಣಿಗಳಿಗೆ ಅನಗತ್ಯ ನೋವು ಸಂಕಟ, ಜೀವಂತ ಪ್ರಾಣಿಯ ಯಾವುದೇ ಅಂಗವನ್ನು ಊನಗೊಳಿಸಿದರೆ, ಹಸಿವು ಅಥವಾ ಇನ್ನಿತರ ಕ್ರಮಗಳಿಂದ ಪ್ರಾಣಿಗೆ ನೋವನ್ನು

ನೀಡುತ್ತಿದ್ದರೆ ಮತ್ತು ಪ್ರಾಣಿಯನ್ನು ಅನಾವಶ್ಯಕವಾಗಿ ಕ್ರೂರವಾಗಿ ಕೊಂದರೆ ಅಂತಹ ವ್ಯಕ್ತಿಗಳಿಗೆ ರೂ.100/– ದಂಡ ಇಲ್ಲವೆ ಮೂರು ತಿಂಗಳು ಜೈಲು ಶಿಕ್ಷೆ ಅಥವಾ ಎರಡು ಶಿಕ್ಷೆಗಳನ್ನು ನೀಡಿತು.

5. ಯಾವುದೇ ವ್ಯಕ್ತಿ ಯಾವುದೇ ಹಸುವಿನ ಮೇಲೆ ಫೂಕಾ ಎಂಬ ಕಾರ್ಯಾಚರಣೆಯನ್ನು ನಡೆಸಿದರೆ ರೂ.100/– ದಂಡ ಮತ್ತು ಮೂರು ತಿಂಗಳು ಜೈಲು ಶಿಕ್ಷೆಯನ್ನು ಪ್ರಕಟಿಸಿ ಫೂಕಾ ಕಾರ್ಯಚರಣೆಯ ನಿರ್ಮೂಲನೆ ಮಾಡಲು ಮುಂದಾಯಿತು.
6. ಪ್ರಾಣಿಗಳು ಅಂಗ ಊನತೆ ಮತ್ತು ದುಡಿಯಲು ಯೋಗ್ಯವಲ್ಲದ ಸ್ಥಿತಿಯಲ್ಲಿರುವ ಪ್ರಾಣಿಯನ್ನು ದುಡಿಮೆಗೆ ಬಳಸಿದರೆ ಅಂತ ಜನರಿಗೆ ರೂ.100/– ದಂಡ ಹೇರಿತು.
7. ಯಾವುದೇ ಪ್ರಾಣಿ, ಯಾವುದಾದರು ರೋಗ, ದೌರ್ಬಲ್ಯ, ಗಾಯ, ಹುಣ್ಣುಗಳಿಂದ, ಇತರೆ ತೊಂದರೆಗಳಿಂದ ಬಳಲುತ್ತಿರುವ ಪ್ರಾಣಿಯನ್ನು ಯಾವುದೇ ಕೆಲಸದಲ್ಲಿ ತೊಡಗಿಸಿದರೆ ರೂ.100/– ದಂಡ ವಿಧಿಸಿತು.
8. ಮೈಸೂರು ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾವುದೇ ಪ್ರಾಣಿಗಳು ಹಿಂಸೆಗೊಳಗಾದರೆ ಅಂತಹ ಪ್ರಾಣಿಗಳ ಚಿಕಿತ್ಸೆ ಮತ್ತು ಆರೈಕೆಗೆ ಬದ್ಧವಾಗಿರುತ್ತದೆ ಎಂಬ ಅಂಶವನ್ನು ಸೇರಿಸಿದೆ.
9. ಮೈಸೂರು ಸಂಸ್ಥಾನದ ಯಾವುದೇ ಪ್ರಾಂತ್ಯಗಳಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ್‌ಗಳು ತಮ್ಮ ಸಮ್ಮುಖದಲ್ಲಿ ಅಪರಾಧ ಸಾಬೀತಾದ ಪ್ರಾಣಿಗಳ ಚಿಕಿತ್ಸೆ ಮತ್ತು ಹಾರೈಕೆಗಾಗಿ ಪ್ರಾಣಿಗಳನ್ನು ಕಡ್ಡಾಯವಾಗಿ ಆಸ್ಪತ್ರೆಗೆ ಸೇರಿಸಬೇಕು, ಹಾಗೂ ದುಡಿಯಲು ಯೋಗ್ಯವಾಗುವವರೆಗೂ ಆಸ್ಪತ್ರೆಯಲ್ಲೇ ಇರಬೇಕು ಮತ್ತು ಆ ಪ್ರಾಣಿಯ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ಗಮನಹರಿಸಬೇಕು ಎಂದು ತಾಕೀತು ಮಾಡಿತು.
10. ಹಿಂಸೆಗೊಳಗಾದಂತಹ ಪ್ರಾಣಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ಸೂಚಿಸಿದ ಆಸ್ಪತ್ರೆಗೆ ದಾಖಲಿಸಿ ಪ್ರಾಣಿಯ ಚಿಕಿತ್ಸೆ, ಆಹಾರ ಮತ್ತು ನೀರುಣಿಸುವ ವೆಚ್ಚ ದರಗಳನ್ನು ಕಾಲಕಾಲಕ್ಕೆ ಪ್ರಾಣಿಯ ಮಾಲೀಕರೇ ಪಾವತಿಸಬೇಕು ಎಂದು ಪ್ರಾಣಿಯ ಮಾಲೀಕರನ್ನು ಎಚ್ಚರಿಸಿತು.
11. ಆಸ್ಪತ್ರೆಗೆ ದಾಖಲಿಸಿದ ಪ್ರಾಣಿಯ ಚಿಕಿತ್ಸೆಯ ವೆಚ್ಚವನ್ನು ಮಾಲೀಕರು ಪಾವತಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಪ್ರಾಣಿಯನ್ನು ಮಾರಾಟ ಮಾಡಿ ಆದಾಯವನ್ನು ಪಾವತಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರು ನಿರ್ದೇಶಿಸಬಹುದು.
12. ಪ್ರಾಣಿ ಮಾರಾಟದ ಹೆಚ್ಚುವರಿ ಆದಾಯವನ್ನು ಎರಡು ತಿಂಗಳೊಳಗೆ ಮಾಲೀಕನು ಮಾಡಿದ ಅರ್ಜಿಯ ಮೇಲೆ ಮಾಲೀಕನಿಗೆ ನೀಡಬಹುದು.

13. ರೋಗಗ್ರಸ್ತ ಅಥವಾ ಊನಗೊಂಡ ಪ್ರಾಣಿಯನ್ನು ಮಾಲೀಕರು ಸಾರ್ವಜನಿಕ ಬೀದಿಗಳಲ್ಲಿ ನಿರ್ವಹಣೆ ಮಾಡದೆ ಪ್ರಾಣಿಗಳನ್ನು ಸರಿಯಾಗಿ ನೋಡಿಕೊಳ್ಳದೆ ಸಾಯಲು ಬಿಟ್ಟರೆ ಅಂತಹ ಮಾಲೀಕನಿಗೆ ರೂ.100/– ದಂಡ.
14. ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಲಿಖಿತ ಮಾಹಿತಿ ಮೇರೆಗೆ ಅಪರಾಧ ನಡೆದ ಅಥವಾ ನಡೆಯಬಹುದಾದ ಸ್ಥಳಗಳಿಗೆ ಕಾನ್‌ಸ್ಟೇಬಲ್‌ಗಿಂತ ಉನ್ನತ ಅಧಿಕಾರಿಯನ್ನು ವಾರೆಂಟ್ ಮೂಲಕ ಅಂತಹ ಸ್ಥಳಗಳನ್ನು ಪ್ರವೇಶಿಸಿ ತಪಾಸಣೆ ನಡೆಸುವ ಅಧಿಕಾರ ನೀಡಲಾಗಿದೆ.
15. ರೋಗದಿಂದ ಬಳಲುತ್ತಿರುವ ಪ್ರಾಣಿಗಳ ನಾಶವನ್ನು ತಕ್ಷಣದಲ್ಲಿ ಮಾಡಲು ಮ್ಯಾಜಿಸ್ಟ್ರೇಟರ್ ನಿರ್ದೇಶಿಸಿ ಇನ್ನಿತರ ಪ್ರಾಣಿಗಳಿಗೆ ಸೋಂಕು ತಗುಲುವುದನ್ನು ತಡೆದು ಆಗು ಅನಾಹುತವನ್ನು ತಪ್ಪಿಸುವ ಮಾರ್ಗವನ್ನು ನೀಡಿದ್ದಾರೆ.
16. ಈ ನಿಯಮಾವಳಿಯಲ್ಲಿ ಯಾವುದೇ ಜನಾಂಗ, ಪಂಗಡ, ಬುಡಕಟ್ಟು ಅಥವಾ ವರ್ಗ, ಧರ್ಮ ಮತ್ತು ಧಾರ್ಮಿಕ ವಿಧಿಗಳ ಬಳಕೆಗಳಿಗೆ ಅಗತ್ಯವಿರುವ ರೀತಿಯಲ್ಲಿ ಯಾವುದೇ ಪ್ರಾಣಿಯನ್ನು ಕೊಲ್ಲುವುದು ಅಪರಾಧವಾಗುವುದಿಲ್ಲ ಎಂದು ಹೇಳುವುದರ ಮೂಲಕ ಸರ್ವಧರ್ಮ ಸಮನ್ವಯ ನೀತಿಯನ್ನು ಸಾರಿತು. [14] ಈ ರೀತಿಯಾಗಿ ಈ ಕಾಯ್ದೆಯನ್ನು ಜಾರಿಗೆ ತರುವುದರ ಮೂಲಕ ಮೈಸೂರು ಸಂಸ್ಥಾನವು ತಮ್ಮ ರಾಜ್ಯದಲ್ಲಿ ವಾಸಿಸುವ ಪ್ರಜೆಗಳೊಂದಿಗೆ ಜೀಸಿಸುವ ಪ್ರಾಣಿಗಳ ಮೇಲಾಗುತ್ತಿದ್ದ ಹಿಂಸೆಗಳನ್ನು ತಪ್ಪಿಸಿ ತಮಗಿರುವ ಮೂಕಜೀವಿಗಳ ಮೇಲಿನ ಪ್ರೀತಿಯನ್ನು ತೋರಿದುದು ಆದರ್ಶನೀಯ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ.

**ಅಡಿ ಟಿಪ್ಪಣಿಗಳು**

1. ದಿ ಮೈಸೂರು ಗೆಜೆಟ್ 1895, ಭಾಗ–3, ಪುಟ–1.
2. ಪೊಲೀಸ್ ಇಲಾಖಾ ವರದಿ 1881, ಪುಟ–46.
3. ಮೈಸೂರು ಆಡಳಿತ ವರದಿ 1874, ಪುಟ–17.
4. ಮೈಸೂರು ಆಡಳಿತ ವರದಿ 1874 ರಿಂದ 1947.
5. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1888, ಪುಟ–7.
6. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1888, ಪುಟ–37.
7. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1891, ಪುಟ–138.
8. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1892, ಪುಟ–147.

9. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1892, ಪುಟ–96.

10. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1892, ಪುಟ–135

11. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1894, ಪುಟ–56.

12. ಮೈಸೂರು ಪ್ರಜಾಪ್ರತಿನಿಧಿ ಸಭೆ ವರದಿ 1895, ಪುಟ–72.

13. ದಿ ಮೈಸೂರು ಗೆಜೆಟ್ 1895, ಪುಟ–556.

14. ದಿ ಮೈಸೂರು ಗೆಜೆಟ್ 1895, ಭಾಗ–2, ಪುಟ–1 ಮತ್ತು 2.

**ಪರಾಮರ್ಶನ ಗ್ರಂಥಗಳು**


1 The Mysore Gazette 1874 to 1947, Divisional Archives Mysore.

2 The Mysore Proceedings 1881 to 1947, Divisional Archives Mysore.

3 The Mysore Represent Assembly Reports 1881 to 1947, Divisiional Archives Mysore.

4 The Mysore Agriculture Files 1881 to 1947, State Archives Department Bengalore.

5 The Mysore Animal Husbandry Files 1881 to 1947 State Archives Department Bengalore.

6 Mysore representative proceedings, Divisional Archives Mysore.

7 Mysore Administrative Reports 1881 to 1947, Divisional Archives Mysore.

8 Selection from the records of mysore palace vol 1 to 4, Divisional Archives Mysore.

9 Palace administration reorts.

10 ಮೈಸೂರು ಬ್ಲೂಬುಕ್ 1919, ಮಿಥಿಕ್ ಸೊಸೈಟಿ ಬೆಂಗಳೂರು.

11 ಮೈಸೂರು ಇನ್ಫಾರ್ಮೇಷನ್ ಬುಲ್ಲೇಟಿನ್ ಮಿಥಿಕ್ ಸೊಸೈಟಿ ಬೆಂಗಳೂರು.

12 ಮೈಸೂರು ಆಡಳಿತಾತ್ಮಕ ವರದಿ 1886–1892